**ಸೋಮವಾರಪೇಟೆ ಪ್ರ ದ ನ್ಯಾ ದಂಡಾಧಿಕಾರಿಯವರ ನ್ಯಾಯಾಲಯ**
**ಸಿಸಿ ನಂಃ 612/2023**

**ಪಿರ್ಯಾದಿಃ** ಅಬಕಾರಿ ಇಲಾಖೆ

ಃ ವಿ ಃ

**ಆರೋಪಿ ಃ** ಡಿ.ಡಿ.ತಮ್ಮಯ್ಯ_

**<u>ದೋಷಾರೋಪಣೆ</u>**

ಶ್ರೀ. ಕೆ.ಗೋಪಾಲಕೃಷ್ಣ, **ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂಡಾ ಧಿಕಾರಿಗಳು, ಸೋಮವಾರಪೇಟೆ, ಆದ ನಾನು ನಿಮ್ಮ ಮೇಲೆ ಅಂದರೆ**

**ಆರೋಪಿಃ** ಡಿ.ಡಿ.ತಮ್ಮಯ್ಯ ಬಿನ್ ದೇವಪ್ಪ, 58 ವರ್ಷ, ಕೂತಿ ಗ್ರಾಮ, ಸೋಮವಾರಪೇಟೆ ತಾಲ್ಲುಕು. ಕೊಡಗು ಜಿಲ್ಲೆ.

**ಈ ಕೆಳಗಿನಂತೆ ದೋಷಾರೋಪಣೆಯನ್ನು ಹೊರೆಸಿದ್ದೇನೆ.**

ದಿಃ **11-08-2023** ರಂದು ಮದಾಹ್ನ **2.30** ರ ಸಮಯದಲ್ಲಿ ಬಂದ ಖಚಿತ ಮಾಹಿತಿ ಮೇರೆಗೆ ಸೋಮವಾರಪೇಟೆ ತಾಲ್ಲೂಕು, ಕೂತಿ ಗ್ರಾಮದ ಆರೋಪಿಯ ಮನೆಯಲ್ಲಿ ಅಕ್ರಮವಾಗಿ ಕಳ್ಳಬಟ್ಟಿ ಸರಾಯಿ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಅಬಕಾರಿ ಇಲಾಖೆ ಸೋಮವಾರಪೇಟೆಯವರು ತಮ್ಮ ಸಿಬ್ಬಂದಿ ಮೂಲಕ ಕೂತಿ ಗ್ರಾಮದ ಆರೋಪಿಯ ಮನೆಯನ್ನು ತಲುಪಿದ್ದು, ಮದಾಹ್ನ 3.30 ರಲ್ಲಿ ಮಹಜರ್ ಮಾಡಿದ್ದು, ಆರೋಪಿಯ ಮನೆಯ ಮುಂಭಾಗದಿಂದ ಎಡ ಭಾಗದ ಸೌಧೆಯನ್ನು ಜೋಡಿಸಿರುವ ಕೊಠಿಗೆಯಲ್ಲಿ ಒಂದು ಪ್ಲಸ್ಟಿಕ್ ಡ್ರಂ ನಲ್ಲಿ ಹುಳಿ ಘಾಟು ವಾಸನೆಯಿಂದ ಕೂಡಿದ ದ್ರವಣ ಕಂಡು ಬಂದಿದ್ದು, ಅದನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ ಅದು ಕಳ್ಳಬಟ್ಟಿ ಸರಾಯಿ ತಯಾರಿಸಲು ಉಪಯೋಗಿಸುವ

ಬೆಲ್ಲದ ಪುಳಗಂಜಿ ಎಂದು ಕಂಡು ಬಂದಿರುತ್ತದೆ. ಅದರಲ್ಲಿ **20**ಲೀ. ಬೆಲ್ಲದ ಪುಳಗಂಜಿ ಇರುತ್ತದೆ. ಅದೇ ರೀತಿ ಪಕ್ಕದಲ್ಲಿದ್ದ ಅಲ್ಯೂಮಿನಿಯಂ ಇಡ್ಲಿ ಪಾತ್ರೆಯಲ್ಲಿ ಕಳ್ಳಬಟ್ಟಿಯನ್ನು ತಯಾರಿಸಲು ಉಪಯೋಗಿಸುವ **17**ಲೀ. ಬೆಲ್ಲದ ಪುಳಗಂಜಿ ಇಟ್ಟುಕೊಂಡಿರುವುದು ಕಂಡ ಬಂದಿದ್ದು ಅದನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ. **ನಿಮ್ಮ ಈ ಕ್ರಮ ಕರ್ನಾಟಕ ರಾಜ್ಯ ಅಬಕಾರಿ ಕಾಯ್ದೆ ಕಲಂ 13(1)(ಎ), 32(1), 34(1)(ಎ) ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.**

**ಪ್ರಃ1 ಈಗ ಓದಿ ವಿವರಿಸಿದ** ದೋಷರೋಪಣೆ **ತಿಳಿದಿದೆಯಾ?**
ಉಃ ತಿಳಿದಿದೆ

**ಪ್ರಃ2 ಮೇಲಿನ** ದೋಷರೋಪಣೆಯನ್ನು **ಒಪ್ಪಿಕೊಳ್ಳುವಿರಾ ಅಥವಾ ನಿಮ್ಮ ಪರ ರಕ್ಷಣೆ ಇದೆಯಾ?**
ಉಃ ತಪ್ಪು ಮಾಡಿಲ್ಲ

**ಮೇಲಿನ ಆರೋಪಣೆಗೆ ನೀವು ಈ ನ್ಯಾಯಾಲಯದ ಮುಂದೆ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.**

-Sd/-

ದಿಃ**21-01-2025** **ಪ್ರ ದ ನ್ಯಾ ದಂ, ಸೋಮವಾರಪೇಟೆ**